# ಬಡವ ನಿನಗೊಬ್ಬರ ಗೊಡವೆ ಯಾತಕ್ಕೋ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
4. **Note:** The lyrics given without highlights are as per Ref. 1. The wordings in Ref. 2 are similar to Ref. 1 except few differences which are not considered here. The lyrics in yellow highlights are as per Ref. 3, which are slightly different.
5. **Note:** Singer has followed lyrics as in Ref. 1.

| | |
|---|---|
| ರಾಗ ಮಧ್ಯಮಾವತಿ ಅಟ ತಾಳ | ರಾಗ: ಮಧ್ಯಮಾವತಿ ತಾಳ: ಏಕ |
| | |
| ಬಡವ ನಿನಗೊಬ್ಬರ ಗೊಡವೆ ಯಾತಕ್ಕೋ | ಬಡವ ನಿನಗೊಬ್ಬರ ಗೊಡವೆ ಏತಕೊ |
| ಒಡವೆ ವಸ್ತು ತಾಯಿ ತಂದೆ | ಒಡವೆ ವಸ್ತು ತಾಯಿ ತಂದೆ |
| ಒಡೆಯ ಕೃಷ್ಣನಿರಲಿಕ್ಕಾಗಿ \|\| ಪ \|\| | ಒಡೆಯ ಕೃಷ್ಣನೆಂದು ನಂಬೋ |
| | |
| ಮಡದಿ ಮಕ್ಕಳು ಎದುರಿಸಿದರೆ | ಒಪ್ಪತ್ತು ಭಿಕ್ಷವ ಬೇಡು |
| ಕಡೆಗಣಿಸಿ ಕೈ ದುಡುಕೀ ಕಂಡ್ಯ | ಒಬ್ಬರಿಗೆ ಒಂದಿಷ್ಟು ನೀಡು |
| ಅಡಿಕೆ ಹೋಳಿಗೆ ಹೋದ ಮಾನ | ಅಪ್ಪನಾದಚ್ಯುತನ ನೋಡು |
| ಆನೆ ಕೊಟ್ಟರೆ ಬಾರದೋ \|\| 1 \|\| | ಆನಂದದಿಂದಲಿ ಪೂಜೆ ಮಾಡು |
| | |
| ಒಪ್ಪತ್ತು ಭಿಕ್ಷವ ಬೇಡು | ಮಡದಿ ಮಕ್ಕಳು ಹೆದರಿಸಿದರೆ |
| ಒಬ್ಬರಿಗೊಂದಿಷ್ಟು ನೀಡು | ಮುಂಕೊಂಡು ನೀ ಹೋದಿಯ ಕಾಣೋ |
| ಅಪ್ಪನಾದಚ್ಯುತನ ಪಾಡು | ಅಡಿಕೆ ಹೋಳಿಗೆ ಹೋದ ಮಾನ |
| ಆನಂದದಿಂದೋಲಾಡು \|\| 2 \|\| | ಆನೆ ಕೊಟ್ಟರೆ ಬಾರದೋ |

ಭೋಗ್ಯ ಕರ್ಮಂಗಳು ಎಲ್ಲ
ನೀಗಿ ಕಳೆದು ಪೋಗುವ ತನಕ
ಮಾಗಿ ಕೋಕಿಲಯೆಂದದಿ ನೀ
ಮುದುರಿಕೊಂಡಿರು ಒದರಬೇಡ || 3 ||

ಬಲ್ಲೆ ನಿನ್ನ ಎಲ್ಲಾ ಮಾತು
ಕ್ಷುಲ್ಲಕ ತಾಣದ ಭ್ರಾಂತು
ಎಲ್ಲರ ಮನೆಯ ದೋಸೆ ತೂತು
ಅಲ್ಲವೇನು ನೋಡಿಕೊ ಈ ಮಾತು

ಓದು ತರ್ಕವೆಲ್ಲ ಭ್ರಾಂತಿ
ಆದಿ ದೇವನ ಕಾಣದನಕ
ಬೂದಿ ಮುಚ್ಚಿದ ಕೆಂಡದಂತೆ
ಬುದ್ಧೀಲಿರು ನಾ ಹೇಳೇನಂತೆ || 4 ||

ವೇದ - ತರ್ಕವೆಲ್ಲವು ಭ್ರಾಂತಿ
ಆದಿ ದೇವನ ಕಾಣದನಕ
ಬೂದಿ ಮುಚ್ಚಿದ ಕೆಂಡದಂತೆ
ಬುದ್ಧಿಯಲಿರು ನಾ ಹೇಳೇನಂತೆ

ದೊರೆತನವಿದ್ದೇನು ಹೆಚ್ಚು
ಸಿರಿತನವಿದ್ದೇನು ಮೆಚ್ಚು
ವರದ ಪುರಂದರ ವಿಠಲನ್ನ
ನರ ದೇಹದಲಿ ನೋಡದನಕ || 5 ||

ದೊರೆತನವು ಏನು ಹೆಚ್ಚು
ಸಿರಿಯು ಏನು ಪಾವನ ಮೆಚ್ಚು
ವರದ ಪುರಂದರ ವಿಠ್ಠಲ ರಾಯನು
ಪರಿಪಾಲಿಪೆನೆಂದು ನಚ್ಚು

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ವಿ.ಸೂ.** : – ಭಕ್ತನು ಅಪೇಕ್ಷೆಪಟ್ಟು ಬಡತನವನ್ನು ಪುರಸ್ಕರಿಸುತ್ತಾನೆ. ಅಂತಹ ಭಕ್ತನ ದಿನಚರಿ ಹೇಗಿರಬೇಕೆಂಬುದು ಈ ಹಾಡಿನಲ್ಲಿ ಇದೆ.

**ಮಾಗಿ ಕೋಗಿಲೆಯಂದದಿ...** – ಮಾಘ ಮಾಸದಲ್ಲಿ ಕೋಗಿಲೆ ಮಧುರವಾಗಿ ಗಾನ ಮಾಡಲಾರದು. ವಸಂತ ಋತು ಬರುವ ತನಕ ಅದು ಕಾಯುತ್ತದೆ, ಹಾಗೆ.

**ಭೋಗ್ಯ** – ಅನುಭವಿಸಬೇಕಾದದ್ದು.

**ಗೊಡವೆ** = ಉಸಾಬರಿ

**ಮುಂಕೊಂಡು** = ಆತುರಪಟ್ಟು

**ಭ್ರಾಂತು** = ಹುಚ್ಚು

**Classification:** Keerthane
**Ankita:** varada purandara vittala

**Location:** NA

**Category:** Jeevana Sutra

**Sub-Category:** badava, Krishna, tayi, tande, abharana, kai, gaja, bhikshe, achyuta, Ananda, karma, deva, buddi, arasa, srimantha,

**Pravachana:** NA

**Explanation:** NA